# ಯುಗಪುರುಷನ ಪರಮ ಚರಮ ಸಂದೇಶ

❑ ಡಿ.ಕೆ. ಈರೇಗೌಡ

**ಮಹಾತ್ಮರು ಬದುಕಿನಲ್ಲಿ ಹೇಗೋ ಹಾಗೆಯೇ ಸಾವಿನಲ್ಲಿಯೂ ತಮ್ಮ ಹಿರಿಮೆಯನ್ನು ಮೆರೆಯುತ್ತಾರೆ ಎಂಬುದು ಸ್ವಾಮಿ ವಿವೇಕಾನಂದರ ಮಟ್ಟಿಗೆ ತುಂಬ ಅನ್ವರ್ಥಕವಾಗಿದೆ. ಸ್ವಾಮಿ ವಿವೇಕಾನಂದರ ಇಹಲೋಕದ ಅಂತಿಮ ದಿನದ ವಿವರಗಳನ್ನು ಮನೋಜ್ಞವಾಗಿ ತಿಳಿಸಿರುವ ಶ್ರೀಯುತ ಡಿ.ಕೆ.ಈರೇಗೌಡರು, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನಾ ವಿಭಾಗದ ವಿಶ್ರಾಂತ ಉಪನಿರ್ದೇಶಕರೂ ಹಾಗೂ ಉತ್ತಮ ಲೇಖಕರೂ ಆಗಿದ್ದಾರೆ.**

ಜಗತ್ತಿನ ಇತಿಹಾಸದಲ್ಲಿ ೧೯೦೨ನೇ ಜುಲೈ ೪, ಶುಕ್ರವಾರ ಒಂದು ದುರ್ದಿನವಾಗಿ ಹೊರನೋಟಕ್ಕೆ ಗೋಚರಿಸಿದರೂ ಸ್ವಾಮಿ ವಿವೇಕಾನಂದರಿಗೆ ಮಹಾದಿನವಾಗಿ ಪರಿಣಮಿಸಿದೆ. ಬಿಡುಗಡೆಯ ಹಬ್ಬಕ್ಕಾಗಿ ಅವರ ಆತ್ಮ ಹಂಬಲಿಸುತ್ತದೆ. ತನ್ನ ಗುರುದೇವನ ಆಜ್ಞೆಯಂತೆ ಮಾನವದೇಹಬಂಧಿತನಾಗಿ, ಎಲ್ಲ ಕಷ್ಟಕೋಟಲೆಗಳನ್ನು ಎದುರಿಸಿ, ಮಾನವತೆಗೆ ಮಾರ್ಗದರ್ಶನ ಮಾಡಿ ತನ್ನ ಜೀವನೋದ್ದೇಶದ ಗುರಿ ತಲುಪಿಯಾಗಿದೆ. ಆದುದರಿಂದಲೇ ಅವರು ಉದ್ಗರಿಸುತ್ತಾರೆ, "ಇನ್ನೊಬ್ಬ ವಿವೇಕಾನಂದನು ಇದ್ದಿದ್ದರೆ ಅವನಿಗೆ ತಿಳಿಯುತ್ತಿತ್ತು, ಈ ವಿವೇಕಾನಂದನು ಏನು ಮಾಡಿದ್ದಾನೆ ಎಂದು! ಆದರೆ ಕಾಲಾಂತರದಲ್ಲಿ ಇನ್ನೆಷ್ಟೋ ಜನ ವಿವೇಕಾನಂದರು ಹುಟ್ಟುವರು!" ಆದರೆ, ವಿವೇಕಾನಂದರು ಇನ್ನೆಷ್ಟು ಜನ ಹುಟ್ಟಿ ಯಾರು? ಪಸರಿಸಿಹ ಈ ಜಗಕೆ ವಿವೇಕಾನಂದನೊಬ್ಬನೆ! ಬಂಧಿತ ಮಾನುಷದೇಹದಿಂದ ಬಿಡುಗಡೆ ಹೊಂದಿ ವಿಶಾಲಜಗತ್ತಿನಲ್ಲಿ ವಿಹರಿಸುತ್ತಾ ಜೀವಕೋಟಿಗಳ ಉದ್ಧಾರದ ಕಾರ್ಯವನ್ನು ಇದಕ್ಕಿಂತ ನೂರ್ಮಡಿಯಾಗಿ ಸಾಸಿರಮಡಿಯಾಗಿ ಮತ್ತೊಂದು ರೂಪದಲ್ಲಿ ಕೈಗೊಳ್ಳಲು ಅಣಿಯಾಗುತ್ತಿದ್ದಾರೆ ಸ್ವಾಮೀಜಿ. ತಮ್ಮ ನಿಜದ ನೆಲೆ ಯಾವುದೆಂಬುದನ್ನು ಅರಿತಾಗಿದೆ. ಆದುದರಿಂದಲೇ "ಮನವೆ ನಡೆ ನಿನ್ನ ಮನೆಗೆ" ಎಂಬ ಭಾವದಲ್ಲಿ ಅವರು ಬೇಲೂರುಮಠದ ಆವರಣದಲ್ಲೆಲ್ಲಾ ತಮ್ಮ ಕೃಪಾಸಿಂಧುವನ್ನು ಸಿಂಪಡಿಸುತ್ತಾ ಸುತ್ತಾಡುತ್ತಿದ್ದಾರೆ. ಶಿಷ್ಯನೊಬ್ಬ "ಸ್ವಾಮೀಜಿ ತಮ್ಮ ಸ್ವರೂಪ ತಮಗೆ ಗೊತ್ತಾಗಿದೆಯೇ?" ಎಂದು ಹಿಂದೊಮ್ಮೆ ಕೇಳಿದ್ದಕ್ಕೆ "ಹೌದೆಂದು" ಈಗಾಗಲೇ ಉತ್ತರಿಸಿಯಾಗಿದೆ.

ಎಂದಿಗಿಂತ ಇಂದು ತುಸು ಮುಂಚೆಯೇ ಎದ್ದ ಸ್ವಾಮೀಜಿ ಪೂರ್ವದಿಗಂತದತ್ತ ದೃಷ್ಟಿ ಹರಿಸಲಾಗಿ ಅರುಣೋದಯದ ಹೊಂಗಿರಣಗಳು ಭಾಗೀರಥಿಯ ಕಲಕಲ ರವದೊಂದಿಗೆ ಬೆರೆತಿರುವ ದೃಶ್ಯಮೋಹಕತೆಯಿಂದ ಪುಳಕಿತರಾಗಿದ್ದಾರೆ. ದೃಷ್ಟಿ ದೂರ ಮಾಡಲಾಗದ ಈ ಅವರ್ಣನೀಯ ಸೌಂದರ್ಯರಾಶಿಯನ್ನು ಕಂಡು ಮಾಯೆಯಿಂದ ಆಚ್ಛಾದಿತವಾಗಿರುವ ಈ ದೃಶ್ಯಗಳೇ ಇಷ್ಟು ಸುಂದರವಾಗಿರುವಾಗ, ಮಾಯೆಯ ಹಿಂದಿರುವ ನಿತ್ಯಸತ್ಯದ ಸ್ವರೂಪ ಇನ್ನೆಷ್ಟು ರಮಣೀಯವಾಗಿರಬೇಕೆಂದು ಬಗೆದು ಆ ಅಖಂಡ ಸಚ್ಚಿದಾನಂದ ಸಾಗರದಲ್ಲಿ ಮೀಯಲೆಳಸುತ್ತಾ ದೇವಮಂದಿರದತ್ತ ಹೆಜ್ಜೆಯಿಡುತ್ತಾರೆ. ಹಾಗೆ ಅಡಿಯಿಡುವಾಗ ತುಸು ತಡೆದು ದಕ್ಷಿಣೇಶ್ವರದತ್ತ ಒಮ್ಮೆ ದೃಷ್ಟಿ ಹರಿಸುತ್ತಾರೆ. ಶ್ರೀ ಗುರುದೇವನು ಆನಂದತುಂದಿಲನಾಗಿ ತನ್ನ ಅವತಾರದ ಪೂರ್ಣೋದ್ದೇಶವನ್ನು ಚಾಚೂತಪ್ಪದೆ ನೇರ್ಪುಗೈದ ಪ್ರಿಯಶಿಷ್ಯನ ಆಲಿಂಗನಕ್ಕಾಗಿ ಕಾತುರನಾಗಿರುವುದನ್ನು ಕಂಡು ಮನದಲ್ಲೆ ನಮಿಸಿ ಮುಂದಡಿಇರಿಸುತ್ತಾರೆ. ದೇವರ ಕೋಣೆಗೆ ಹೋಗಿ ಕಿಟಕಿಬಾಗಿಲುಗಳನ್ನು ಹಾಕಿ ಧ್ಯಾನಮಗ್ನರಾಗುತ್ತಾರೆ. ಧ್ಯಾನ ಮುಗಿಸಿ ಹೊರಬಂದ ಮೇಲೆ ಊಟದ ಸಮಯವಾಗಲು ಸ್ವಾಮಿ ಪ್ರೇಮಾನಂದರು ಮತ್ತು ಇತರ ಶಿಷ್ಯರೊಂದಿಗೆ ಊಟಕ್ಕೆ ಕೂರುತ್ತಾರೆ. ಹಾಸ್ಯಪರಿಹಾಸ್ಯಗಳಿಂದ ಅಳ್ಳೆ ಬಿರಿಯುವಂತೆ ನಗಿಸುತ್ತಾ, ಇಡೀ ಆವರಣವನ್ನೇ ನಗೆಗಡಲಿನಲ್ಲಿ ಮುಳುಗಿಸುತ್ತಾರೆ. "ಆನಂದಮಯ ಈ ಜಗಹೃದಯ"— ಈ ಜಗತ್ತಿಗೆ ಬಂದ ಮೇಲೆ ಆನಂದದಿಂದ ಇರಬೇಕು. ಸೊರಗುವುದು ಕೊರಗುವುದು ಸಲ್ಲ. ಕಷ್ಟಕಾರ್ಪಣ್ಯಗಳು ಬಂದರೂ, ಕೊನೆಗೆ ಸಾವಿನ ದವಡೆಯಲ್ಲಿಯೂ ನಗೆಯ ಅಲೆಯನ್ನು ಚೆಲ್ಲಬೇಕೆಂಬುದನ್ನು ತಮ್ಮ ನಡೆನುಡಿಗಳಿಂದ ಧ್ವನಿಸುತ್ತಾ ಊಟ ಮುಗಿಸುತ್ತಾರೆ.



ಸ್ವಲ್ಪ ವಿಶ್ರಾಂತಿ ಪಡೆದನಂತರ ಶಿಷ್ಯರಿಗೆ ಸುಮಾರು ಮೂರು ಗಂಟೆಗಳ ಕಾಲ ಪಾಣಿನಿಯ ವ್ಯಾಕರಣವನ್ನು ಬೋಧಿಸುತ್ತಾರೆ. ಶುಷ್ಕವಾದ ವ್ಯಾಕರಣವು ಭಾರವಾಗದಂತೆ ಮಧ್ಯೆ ಮಧ್ಯೆ ಹಾಸ್ಯ ಮಾಡುತ್ತಾ, ನಗೆಯಿಂದ ಶಿಷ್ಯರ ಬಗೆ ಮುದುಡದಂತೆ ಮಾಡಿ ಕಾಲದ ಪರಿವೆಯನ್ನೇ ಮರೆಸುತ್ತಾರೆ. ತದನಂತರ ಸ್ವಾಮಿ ಪ್ರೇಮಾನಂದರೊಡನೆ ವಾಯುವಿಹಾರ ಮಾಡುತ್ತಾ ವೇದವಿದ್ಯಾಲಯವೊಂದನ್ನು ತೆರೆಯುವ ಬಗ್ಗೆ ಸಮಾಲೋಚಿಸುತ್ತಾರೆ. ಸಂಜೆಮಾಗಲು ತಮ್ಮ ಕೊಠಡಿಯ ಮೆಟ್ಟಲುಗಳನ್ನೇರುವಾಗ ಎರಡನೆ ಮೆಟ್ಟಲಿನಲ್ಲಿ ನಿಂತು ಆಶ್ರಮದಲ್ಲಿರುವ ಸಾಧುಗಳು ಬಳಸುತ್ತಿರುವ ಸೊಳ್ಳೆಪರದೆಗಳು ಹರಿದಿರುವುದನ್ನು ನೆನಪಿಗೆ ತಂದುಕೊಂಡು, ಸ್ವಾಮಿ ಬೋಧಾನಂದರನ್ನು ಕರೆದು ಎಲ್ಲರಿಗೂ ಹೊಸ ಸೊಳ್ಳೆ ಪರದೆಗಳನ್ನು ತಂದುಕೊಡುವಂತೆ ಸೂಚಿಸುತ್ತಾರೆ.

ಸ್ವಾಮೀಜಿ ತಮ್ಮ ಸಾವಿನ ಘಳಿಗೆಯನ್ನು ಮೊದಲೇ ನಿರ್ಧರಿಸಿಯಾಗಿದೆ. ಕೊನೆಯ ಕ್ಷಣದವರೆವಿಗೂ ತಮ್ಮ ದಿನನಿತ್ಯದ ಯಾವ

ಕರ್ತವ್ಯವನ್ನು ಕಿಂಚಿತ್ತೂ ಮರೆಯದೆ ನೆರವೇರಿಸುವುದರ ಮೂಲಕ ಮನುಷ್ಯ ಯಾವ ಕ್ಷಣದಲ್ಲೂ ತನ್ನ ಕರ್ತವ್ಯಗಳನ್ನು ಮರೆಯಬಾರದು ಎಂಬುದನ್ನು ಸಾರಿದ್ದಾರೆ. ಬಾಳು ಆನಂದಮಯವಾದುದು, ಅದನ್ನು ಆನಂದದಿಂದ ಅನುಭವಿಸುತ್ತಾ, ನಿಷ್ಕಾಮ ಕರ್ಮ ಮಾಡುತ್ತಾ ಭಗವಂತನತ್ತ ಸಾಗಬೇಕೆಂಬುದನ್ನು ಸೂಚಿಸಿದ್ದಾರೆ.

ಮಹಾಸಮಾಧಿಯನ್ನು ಹೊಂದಲು ತಮ್ಮ ಕೊಠಡಿಗೆ ಸೇರಿದ ಸ್ವಾಮೀಜಿ ತಮ್ಮ ಸೇವಕ ಬ್ರಹ್ಮಚಾರಿ ಬ್ರಜೇಂದ್ರನಿಗೆ "ನಾನು ಕರೆಯುವವರೆಗೂ ಕಾಯುತ್ತ ಧ್ಯಾನ ಮಾಡುತ್ತಿರು" (Wait and meditate till I call you) ಎಂದು ಹೇಳಿ ಹೊರಗೆ ಕಳುಹಿಸುತ್ತಾರೆ. ಇದೇ ತಮ್ಮ ಭೌತಿಕದೇಹದ ಮೂಲಕ ಅವರಾಡಿದ ಕೊನೆಯ ಮಾತು. ಈ ಮಾತು ಕೇವಲ ಬ್ರಜೇಂದ್ರನಿಗೆ ಹೇಳಿದ ಮಾತಲ್ಲ. ಬ್ರಜೇಂದ್ರನನ್ನು ನೆಪವನ್ನಾಗಿ ಮಾಡಿಕೊಂಡು ಅನಂತ ಸತ್ಯದ ಪರಮ ಚರಮ ಸಂದೇಶವೊಂದನ್ನು ಈ ಜಗತ್ತಿಗೆ ಸಾರಿ ಹೋಗಿದ್ದಾರೆ.

ಇಲ್ಲಿ 'ಧ್ಯಾನ ಮಾಡು'ವುದೆಂದರೆ ಕೇವಲ ಜಪಮಣಿ ಹಿಡಿದು ಏಕಾಂತದಲ್ಲಿ, ಧ್ಯಾನದಲ್ಲಿ ಕೂರುವುದು ಎಂದಲ್ಲ. ನಮ್ಮ ಬದುಕೇ ತಪಸ್ಸು. ನಾವು ಮಾಡುವ ಪ್ರತಿಯೊಂದು ಕೆಲಸವೂ ತಪಸ್ಸೇ. ನಮ್ಮ ನಡೆನುಡಿಗಳೂ ಜಪತಪಗಳೇ. "ಮಾಳ್ಪ ಕೆಲಸಗಳೆಲ್ಲ ನೈವೇದ್ಯವೆ." "ಕಣ್ಣು ಕಿವಿ ಮೂಗು ಬಾಯಿಂದ್ರಿಯಗಳು ಗೈದ ಗೆಯ್ಮೆ ಎಲ್ಲವೂ ತಪವೇ!" ಇದನ್ನು ಸ್ವಾಮೀಜಿ ಅವರೇ ಸ್ಪಷ್ಟಮಾತುಗಳಲ್ಲಿ ತಿಳಿಸಿದ್ದಾರೆ. ಮಾಯಾವತಿಯಲ್ಲಿದ್ದಾಗ ಸ್ವಾಮಿ ಸ್ವರೂಪಾನಂದರನ್ನು ಬಳಿಗೆ ಕರೆದು "ಅನೇಕ ಗಂಟೆಗಳ ಕಾಲ ಧ್ಯಾನಮಾಡುವುದು ನಿಮ್ಮಿಂದ ಸಾಧ್ಯವಿಲ್ಲ. ಬೆಳಗ್ಗೆ ಒಂದು ಐದು ನಿಮಿಷ, ಸಾಯಂಕಾಲ ಒಂದು ಐದು ನಿಮಿಷಗಳವರೆಗೆ ಮನಸ್ಸನ್ನು ಸ್ಥಿರಗೊಳಿಸಿ ಕೇಂದ್ರೀಕರಿಸಿದರೆ ಸಾಕು. ಉಳಿದ ಕಾಲವನ್ನು ಕೆಲಸಕ್ಕಾಗಿಯೂ, ದೇಶಸೇವೆಗಾಗಿಯೂ ಧಾರೆಯೆರೆಯಬೇಕು. ನನ್ನ ಶಿಷ್ಯರಿಗೆ ಸೇವೆಯೇ ತಪಸ್ಸು! ನಿಷ್ಕಾಮ ಕರ್ಮವೇ ಪವಿತ್ರತಮ ಸಾಧನೆ!" (ವಿವೇಕಾನಂದ, ಕುವೆಂಪು, ಪು.೨೦೪)

ಹೀಗೆ ಬದುಕನ್ನೇ ತಪಸ್ಸೆಂದು ಸ್ವೀಕರಿಸಿ ನಿಷ್ಕಾಮಕರ್ಮ ಮಾಡುತ್ತಾ ಬಾಳನ್ನು ಸಾರ್ಥಕ ಮಾಡಿಕೊಳ್ಳಬೇಕಾಗುತ್ತದೆ— ಬಿಡುಗಡೆಗಾಗಿ ಹಂಬಲಿಸುವ ಚೇತನಗಳು. ಇದನ್ನೇ ವ್ರತವಾಗಿ ಸ್ವೀಕರಿಸಿ ಸಾಗುವ ಸಾಧಕರಿಗೂ ಒಮ್ಮೊಮ್ಮೆ ಸಂಶಯ ತಲೆದೋರುವುದುಂಟು, ಇನ್ನೂ ತನಗೇನೂ ದೊರೆತಿಲ್ಲವೆಂದು ಗೊಣಗುವುದುಂಟು. ಕೊಠಡಿಯ ಬಾಗಿಲು ಮುಚ್ಚಿ ಏಕಾಂತದಲ್ಲಿ ಜಪತಪಾದಿಗಳನ್ನು ಕೈಗೊಂಡರೂ ದೇವರ ಸಾಕ್ಷಾತ್ಕಾರವಾಗಲಿಲ್ಲವೆಂದು ಶಿಷ್ಯನೊಬ್ಬ ದೂರಿದನು. ಅವನಿಗೆ ಸ್ವಾಮೀಜಿ ಹೀಗೆ ಹೇಳಿದರು: "ಮಗು, ಮೊದಲು ಕೊಠಡಿಯ ಬಾಗಿಲನ್ನು ತೆರೆದು ಕಣ್ಣು ಬಿಟ್ಟು ಹೊರಗೆ ನೋಡು. ಕಣ್ಣು ಮುಚ್ಚಿಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ನಿನ್ನ ನೆರೆಹೊರೆಯಲ್ಲಿ ಬೇಕಾದಷ್ಟು ಮಂದಿ ದರಿದ್ರರೂ ಅನಾಥರೂ ದುಃಖಿಗಳೂ ಇದ್ದಾರೆ. ಅವರಿಗೆ ನೆರವಾಗು. ಹೊಟ್ಟೆಗಿಲ್ಲದವರಿಗೆ ಅನ್ನದಾನ ಮಾಡು. ಬಟ್ಟೆಯಿಲ್ಲದವರಿಗೆ ವಸ್ತ್ರದಾನ ಮಾಡು. ರೋಗಿಗಳಿಗೆ ಶುಶ್ರೂಷೆ ಮಾಡು. ಮೂರ್ಖರಿಗೆ ಬುದ್ಧಿಕಲಿಸು. ಆಗ ನಿನಗೆ ಶಾಂತಿ ಲಭಿಸುವುದು". ಆದರೆ ಸ್ವಲ್ಪ ಕಾಯಬೇಕು. ಗುರುವಿಗೇನೊ ಶಿಷ್ಯನ ಮೇಲೆ ಅಪಾರವಾದ ಅಕ್ಕರೆಯುಂಟು. ಆದರೇನು ಮಾಡುವುದು, ಉತ್ತೀರ್ಣನಾಗಲು ಶಿಷ್ಯ ನೂರಕ್ಕೆ ನೂರು ಅಲ್ಲದಿದ್ದರೂ ಕೊನೆಯಪಕ್ಷ ಮೂವತ್ತೈದು ಅಂಕಗಳನ್ನಾದರೂ ಪಡೆಯಲೇಬೇಕು. ಗುರುವಿಗೆ ಶಿಷ್ಯನ ಮೇಲೆ ಎಷ್ಟೇ ಒಲವಿದ್ದರೂ ನಿಯಮ ಮೀರುವಂತಿಲ್ಲವಲ್ಲ? ಇಲ್ಲಿ 'ಗ್ರೇಸ್ ಮಾರ್ಕ್ಸ್'ಗೆ (ಕೃಪಾಂಕಕ್ಕೆ) ಅವಕಾಶವಿಲ್ಲ! ಅದಕ್ಕಾಗಿ ಸ್ವಾಮೀಜಿ ಹೇಳುತ್ತಾರೆ: ಕರ್ಮಮಾಡು. ಆದರೆ ಸ್ವಲ್ಪ ಕಾಯಿ. ಕರ್ಮಸಾರ್ಥಕತೆ ಪಡೆದೊಡನೆಯೆ ಕರೆ ಬಂದೇ ಬರುತ್ತದೆ. "I call you" ಎಂದು ಭರವಸೆ ನೀಡುತ್ತಾರೆ. ('ನನ್ನ ಭಕ್ತ ಎಂದಿಗೂ ನಾಶವಾಗುವುದಿಲ್ಲ' ಎಂದು ಗೀತೆಯಲ್ಲಿ ಹೇಳುವ ಶ್ರೀಕೃಷ್ಣನ ಮಾತನ್ನು ನೆನಪಿಗೆ ತಂದುಕೊಳ್ಳಬಹುದು). ಸ್ವಾಮಿ ವಿವೇಕಾನಂದರು ತಮ್ಮ ಅಸ್ಖಲಿತ ವಾಣಿಯಿಂದ ಪುನಃಪುನಃ ಘೋಷಿಸಿದ್ದಾರೆ: "ಈ ನನ್ನ ದೇಹದಿಂದ ಹೊರಗೆ ಹೋಗುವುದು, ಅದನ್ನು ಹಳೆಯ ಬಟ್ಟೆಯಂತೆ ಬಿಸಾಡುವುದು ಒಳ್ಳೆಯದೆಂದು ನನಗನಿಸುತ್ತದೆ. ಆದರೆ ಕೆಲಸ ಮಾಡುವುದನ್ನು ಮಾತ್ರ ನಾನು ನಿಲ್ಲಿಸುವುದಿಲ್ಲ. ಇಡೀ ಜಗತ್ತು ತಾನು ಭಗವಂತನೊಡನೆ ಒಂದು ಎಂಬುದನ್ನು ಅರಿಯುವವರೆಗೂ ಎಲ್ಲೆಲ್ಲಿಯೂ ನಾನು ಜನರಿಗೆ ಸ್ಫೂರ್ತಿಯನ್ನೀಯುತ್ತ ಹೋಗುತ್ತೇನೆ."

ಆದರೆ ಸಂಶಯಾತ್ಮಕವಾದ ನಮ್ಮ ಮನಸ್ಸಿಗೆ ಮೇಲಿನ ಮಾತುಗಳಲ್ಲಿ ಕೆಲವೊಮ್ಮೆ ನಂಬಿಕೆ ಬರುವುದು ಕಷ್ಟ. ಸತ್ತಮೇಲೆ ಮತ್ತೆ ಕೆಲಸ ಮಾಡುವುದೆಂದರೇನು ಇತ್ಯಾದಿ... ... ನಮ್ಮ ಸಂಶಯಗ್ರಸ್ತ ಮನಸ್ಸಿನ ಒಳಸುಳಿಯನ್ನರಿತ ಸ್ವಾಮೀಜಿ ಅದರ ಪರಿಹಾರಕ್ಕಾಗಿ ಒಂದು ನಿದರ್ಶನವನ್ನು ನಮಗೆ ಒದಗಿಸಿದ್ದಾರೆ. ಜುಲೈ ೪, ೧೯೦೨ರಂದು ದೇಹವಳಿದ ತಕ್ಷಣ ಮದರಾಸಿನಲ್ಲಿದ್ದ ತಮ್ಮ ಸೋದರಸಂನ್ಯಾಸಿ ಶ್ರೀರಾಮಕೃಷ್ಣಾನಂದರಲ್ಲಿಗೆ ಅಶರೀರಿಯಾಗಿ ಬಂದು "Look here Shashi, I throw away this body like spitting out spittle" ["ನೋಡು, ಶಶಿ (ಸ್ವಾಮಿ ರಾಮಕೃಷ್ಣಾನಂದರ ಸಂನ್ಯಾಸಪೂರ್ವದ ಹೆಸರು), ನಾನು ಈ ದೇಹವನ್ನು ಎಂಜಲನ್ನು ಉಗುಳುವಂತೆ ಎಸೆಯುತ್ತೇನೆ"] ಎಂದು ಹೇಳುತ್ತಾರೆ. ಸ್ವಾಮೀಜಿ ಅವರು ಈಗಲೂ ಜಗತ್ತಿನ ಹಿತಕ್ಕಾಗಿ ಮಾನವಕೋಟಿಯ ಮುಕ್ತಿಗಾಗಿ ಕೆಲಸಮಾಡುತ್ತಲೇ ಇದ್ದಾರೆ— ಅಂದಿಗಿಂತ ಇಂದು ವಿಶ್ವವ್ಯಾಪಿಯಾಗಿ! ದೇಹಧಾರಿಯಾಗಿದ್ದಾಗ ಅವರಿಗೆ ಇತಿಮಿತಿಗಳಿದ್ದವು. ಸೃಷ್ಟಿರಚನೆಯ ಹಿಂದಿರುವ ಋತಶಕ್ತಿಯ ನೀತಿನಿಯಮಗಳನ್ನು ಪಾಲಿಸಲೇಬೇಕಿತ್ತು. ಈಗ ವಾಯುವಿನಂತೆ ವಿಶ್ವವೆಲ್ಲವನ್ನೂ ಆವರಿಸಿ ಸ್ಫೂರ್ತಿ ನೀಡುತ್ತಲೇ ಇದ್ದಾರೆ. ನಾವಾದರೂ ಅವರೇ ಹೇಳಿರುವಂತೆ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬಂತೆ ನಿಷ್ಕಾಮಕರ್ಮ ಮಾಡುತ್ತಾ, "ಕರೆ ಎಂದು ಬರುವುದೊ ನಾನರಿಯೆನರಿಯೆ, ಕಾಯುವೆನು ಕರೆಬರುವ ಪರಿಯಂತೆ ದೊರೆಯೆ" ಎಂಬ ಕವಿವಾಣಿಯನ್ನು ನೆನೆದು ಭಗವಂತನ ಕೃಪೆಗಾಗಿ ಕಾಯುತ್ತಾ ಬಾಳನ್ನು ಸಾರ್ಥಕ ಮಾಡಿಕೊಳ್ಳಬೇಕಾಗಿದೆ.